3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ, ತುಮಕೂರು

**Spl.C. No. 101/2020**

ಪ್ರಾ.ಸಾ.5

ಚಾ.ಸಾ.6

| | |
|---|---|
| ಹೆಸರು | ದಯಾನಂದ |
| ತಂದೆಯ ಹೆಸರು | ಎ. ಎಲ್ ನಾಗರಾಜು |
| ವಯಸ್ಸು | 48 ವರ್ಷ |
| ಉದ್ಯೋಗ | ಗ್ರಾಮಲೆಕ್ಕಾಧಿಕಾರಿಗಳು |
| ವಾಸಸ್ಥಳ | ಅಮ್ಮನಘಟ್ಟ. |

ಸಾಕ್ಷಿಯನ್ನು ದಿನಾಂಕ 31.08.2024 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) 2013 ರಿಂದ ನಾನು ಕೊಡಿಗೇಹಳ್ಳಿ ವೃತ್ತದಲ್ಲಿ ಗ್ರಾಮಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 27.01.2020 ರಂದು ಗುಬ್ಬಿ ತಹಶೀಲ್ದಾರವರ ಮೌಖಿಕ ಆದೇಶದ ಮೇರೆಗೆ ತನಿಖಾಧಿಕಾರಿಯವರೊಂದಿಗೆ ಬಿ.ಕೆ. ಗುಡ್ಡ ಕಾವಲ್ ಸರ್ವೆನಂಬರ್.3 ರ ಜಮೀನಿಗೆ ಹೋಗಿರುತ್ತೇನೆ. ಆ ಜಮೀನು ಚಿಕ್ಕತಾಯಮ್ಮರವರ ಹೆಸರಿನಲ್ಲಿತ್ತು. ಜಯಮ್ಮ ಮತ್ತು ಚಿಕ್ಕತಾಯಮ್ಮನವರು ಗಲಾಟೆ ಮಾಡಿಕೊಂಡಿರುತ್ತಾರೆ ಎಂದು ನನಗೆ ತನಿಖಾಧಿಕಾರಿಗಳು ತಿಳಿಸಿರುತ್ತಾರೆ. ಸ್ಥಳದಲ್ಲಿ ಮಧ್ಯಾಹ್ನ 3.00 ಗಂಟೆಯಿಂದ 4.30 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿಕೊಂಡಿರುತ್ತಾರೆ. ಸ್ಥಳದಲ್ಲಿ ತನಿಖಾಧಿಕಾರಿಯವರು 2 ದೊಣ್ಣೆ, 1 ಕಡ್ಡಿ, ಕರೀಮಣಿ, ಹಸಿರು ಬಣ್ಣದ ಬಳೆಯ ಚೂರುಗಳು, ಒಂದು ತಾತೀಕಾಯಿ ಇವುಗಳನ್ನು ವಶಕ್ಕೆ ತೆಗೆದುಕೊಂಡಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ.

2) ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಮು.ಮಾ.1 ರಿಂದ 6 ನ್ನು ಗುರುತಿಸುತ್ತೇನೆ. ಈಗ ನನಗೆ ತೋರಿಸಿದ ನಿ.ಪಿ.2 ರಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಸ್ಥಳದಲ್ಲೇ ಮಾಡಿರುತ್ತೇನೆ. ಸ್ಥಳ ಪಂಚನಾಮೆಯ ಕಾಲದಲ್ಲಿ ಚಾಸಾ.5, ಪೋಲೀಸರು ಇದ್ದರು, ಇತರೆ ಯಾರೆಲ್ಲಾ ಇದ್ದರು ಎಂದು ನೆನಪಿಲ್ಲ.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರು ಮಾಡಿರುವ ಪಂಚನಾಮೆಗೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲು: ಸರ್ಕಾರಿ ಅಭಿಯೋಜಕರವರಿಂದಃ**

3) ಪಂಚನಾಮೆಯನ್ನು ಚಿಕ್ಕಗುಡ್ಡ ಕಾವಲ್ ಸರ್ವೆ ನಂಬರ್ 3ರ ಕರೇತಿಮ್ಮ ತಾಯಿ ಕರೆಲಕ್ಕಿರವರ ಜಮೀನಿನಲ್ಲಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಪಂಚನಾಮೆಯ ಕಾಲದಲ್ಲಿ ಚಾ.ಸಾ.1 ರವರು ಹಾಜರಿದ್ದರು ಎಂದರೆ ಸರಿ. ಅವರು ಸ್ಥಳವನ್ನು ನಮ್ಮ ಸಮಕ್ಷಮ ತೋರಿಸಿ ಘಟನೆಯ ಬಗ್ಗೆ ವಿವರಿಸಿರುತ್ತಾರೆ ಎಂದರೆ ಸರಿ. ಆರೋಪಿಗಳು ಮತ್ತು ಚಾಸಾ.1 ರವರ ನಡುವೆ ಆದ ಗಲಾಟೆಯ ವಿಚಾರವಾಗಿ ಪಂಚನಾಮೆ ಮಾಡಿಕೊಂಡಿದ್ದರು ಎಂದರೆ ಸರಿ. ಪೋಲಿಸರು ಸ್ಥಳದಲ್ಲಿ ಒಂದು ನಕ್ಷೆಯನ್ನು ತಯಾರು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಭಾವಚಿತ್ರಗಳನ್ನು ಸಹ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ನಂತರ

ನಾನು ಮತ್ತು ಚಾಸಾ,5 ರವರು ಪಂಚನಾಮೆಗೆ ಸಹಿಗಳನ್ನು ಮಾಡಿಕೊಂಡಿದ್ದೇವೆ ಎಂದರೆ ಸರಿ.

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ. ವೈ. ಎಸ್ ವಕೀಲರಿಂದ :**

ದಿನಾಂಕ 27.01.2020 ರಂದು ನಾನು ಗುಬ್ಬಿ ತಹಶೀಲ್ದಾರವರ ಮೌಖಿಕ ಆದೇಶದ ಮೇರೆಗೆ ತನಿಖಾಧಿಕಾರಿಯವರೊಂದಿಗೆ ಬಿ.ಕೆ. ಗುಡ್ಡ ಕಾವಲ್ ಸರ್ವೆನಂಬರ್.3 ರ ಜಮೀನಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್.3 ರ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ಪೋಲಿಸರು ಸದರಿ ಜಮೀನು ಯಾರಿಗೆ ಸೇರಿರುತ್ತದೆ ಎಂದು ನನಗೆ ಹೇಳಿರುತ್ತಾರೆ ಎಂದರೆ ಸರಿ. ಮು.ಮಾ.1 ರಿಂದ 5 ಯಾರು ಹಾಜರುಪಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪಂಚನಾಮೆಯ ಕಾಲದಲ್ಲಿ ಸುಮಾರು 50 ಕ್ಕಿಂತ ಹೆಚ್ಚು ಜನರುಗಳು ಸೇರಿದ್ದರು, ಅವರ ಹೆಸರುಗಳು ನನಗೆ ಗೊತ್ತಿಲ್ಲ. ಗಲಾಟೆಯ ಬಗ್ಗೆ ಯಾರು ತಿಳಿಸಿರುವುದಿಲ್ಲ ಎಂದರೆ ಸರಿ. ನಾವು ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ತನಿಖಾಧಿಕಾರಿಯವರ ಕಚೇರಿಯಲ್ಲಿ ಮಹಜರನ್ನು ತಯಾರು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದೂರನ್ನು ಯಾರು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೋಲಿಸರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ